# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:70.00 ಕಿ.ಮೀ. ನಿಂದ 165.60 ಕಿ.ಮೀ. ವರೆಗೂ ಸಂಪರ್ಕ ಕಲ್ಪಿಸುವ ಪೈಪ್ ಲೈನ್ ಕಾಮಗಾರಿಯ ಡಿ.ಪಿ.ಆರ್. ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

** ** **

*ಓದಲಾಗಿದೆ :-*

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-2/ಹೆಬ್ಬೂರು/ಲಿಂಕ್‌ಪೈಪ್‌ಲೈನ್/16/2018-199/3489, ದಿನಾಂಕ:16-01-2019.

*ಪ್ರಸ್ತಾವನೆ :-*

ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರು ಹೇಮಾವತಿ ನದಿಯು ಕಾವೇರಿ ನದಿಯ ಒಂದು ಉಪನದಿಯಾಗಿದ್ದು, ಇದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಪಶ್ಚಿಮ ಘಟ್ಟಗಳಲ್ಲಿ ಬಳ್ಳರಾಯನದುರ್ಗದ ಬಳಿ ಹುಟ್ಟಿ, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ 192.00 ಕಿ.ಮೀ. ಹರಿದು ನಂತರ ಕೃಷ್ಣರಾಜಸಾಗರದ ಮೇಲ್ಭಾಗದಲ್ಲಿ ಕಾವೇರಿ ನದಿಯನ್ನು ಸೇರುತ್ತಿದ್ದು, ಈ ನದಿಗೆ ಅಡ್ಡಲಾಗಿ ಹಾಸನ ಜಿಲ್ಲೆಯ ಗೊರೂರು ಗ್ರಾಮದ ಬಳಿ ಅಣೆಕಟ್ಟನ್ನು ನಿರ್ಮಿಸಲಾಗಿರುತ್ತದೆ ಹಾಗೂ ಹೇಮಾವತಿ ಜಲಾಶಯವನ್ನು 1967-68 ರಲ್ಲಿ ಪ್ರಾರಂಭಿಸಿ 1978 ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

2. ಹೇಮಾವತಿ ಜಲಾಶಯದಿಂದ ಹೇಮಾವತಿ ಎಡದಂಡೆ ನಾಲೆ, ಹೇಮಾವತಿ ಬಲದಂಡೆ ನಾಲೆ ಹಾಗೂ ಹೇಮಾವತಿ ಬಲಮೇಲ್ದಂಡೆ ನಾಲೆಗಳ ಮೂಲಕ ಒಟ್ಟು 6,55,000 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಯೋಜಿಸಲಾಗಿದೆ. ಕಾವೇರಿ ಜಲವಿವಾದ ನ್ಯಾಯಮಂಡಳಿಯ ಅಂತಿಮ ತೀರ್ಪಿನಲ್ಲಿ ಹೇಮಾವತಿ ಯೋಜನೆಗೆ 43.67 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಿದ್ದು, ಇದರಲ್ಲಿ ಹೇಮಾವತಿ ಯೋಜನಾ ವಲಯ, ಗೊರೂರಿಗೆ 18.853 ಟಿ.ಎಂ.ಸಿ. ಹಾಗೂ ಹೇಮಾವತಿ ನಾಲಾ ವಲಯ, ತುಮಕೂರು ವಲಯಕ್ಕೆ 24.817 ಟಿ.ಎಂ.ಸಿ. ನೀರಿನ ಹಂಚಿಕೆ ಮಾಡಿದೆ.

3. ಹೇಮಾವತಿ ನಾಲಾ ವಲಯ, ತುಮಕೂರು ವ್ಯಾಪ್ತಿಯಲ್ಲಿ ತುಮಕೂರು ಶಾಖಾ ನಾಲೆ, ನಾಗಮಂಗಲ ಶಾಖಾ ನಾಲೆ ಮತ್ತು ಬಾಗೂರು ನವಿಲೆ ಸುರಂಗ ನಿರ್ಗಮನ ಏತ ನೀರಾವರಿ ಯೋಜನೆಗಳು ಒಳಗೊಂಡಿದ್ದು, ಒಟ್ಟಾರೆ 295059 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಮತ್ತು ಕುಡಿಯುವ ನೀರಿನ ಬೇಡಿಕೆಗಳನ್ನು ಪೂರೈಸುವುದು ಒಳಗೊಂಡಂತೆ 24.817 ಟಿ.ಎಂ.ಸಿ. ನೀರಿನ ಹಂಚಿಕೆ ಮಾಡಲಾಗಿರುತ್ತದೆ.

4. ಬಾಗೂರು ನವಿಲೆ ಸುರಂಗ ನಿರ್ಗಮನದಿಂದ ಬರುವ ವೈ-ನಾಲೆಯು 5.50 ಕಿ.ಮೀ. ಇದ್ದು, ನಂತರ ತುಮಕೂರು ಶಾಖಾ ನಾಲೆ ಮತ್ತು ನಾಗಮಂಗಲ ಶಾಖಾ ನಾಲೆಗಳಾಗಿ ಇಬ್ಭಾಗವಾಗುತ್ತವೆ. ತುಮಕೂರು ಶಾಖಾ ನಾಲೆಯು ಒಟ್ಟು 240 ಕಿ.ಮೀ. ಉದ್ದವಿದ್ದು, 1445 ಕ್ಯೂಸೆಕ್ಸ್ ನೀರನ್ನು ಹರಿಸಲು ವಿನ್ಯಾಸಿಸಲಾಗಿರುತ್ತದೆ. ತುಮಕೂರು ಶಾಖಾ ನಾಲೆಯಲ್ಲಿ 1996 ರಿಂದ ನೀರನ್ನು ಹರಿಸಲಾಗುತ್ತಿದ್ದು, ಗರಿಷ್ಠ 1100 ಕ್ಯೂಸೆಕ್ಸ್ ನೀರನ್ನು ಮಾತ್ರ ನಾಲೆಯಲ್ಲಿ ಹರಿಸಲು ಸಾಧ್ಯವಾಗಿರುತ್ತವೆ. ಆದ್ದರಿಂದ ನಾಲೆಯ 170.00 ಕಿಮೀ ಮುಂದಕ್ಕೆ ನೀರು ಹರಿಸಲು ಸಾಧ್ಯವಾಗದೇ ನೀರಾವರಿಗೆ ಮತ್ತು ಕುಡಿಯುವ ನೀರಿನ ಯೋಜನೆಗಳಿಗೆ ನೀರನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ.

5. ತುಮಕೂರು ಶಾಖಾ ನಾಲಾ ವ್ಯಾಪ್ತಿಯಲ್ಲಿ ಹಲವಾರು ಕುಡಿಯುವ ನೀರಿನ ಯೋಜನೆಗಳು ಅನುಮೋದನೆಗೊಂಡಿದ್ದು, ಅಚ್ಚುಕಟ್ಟಿಗೆ ನೀರೊದಗಿಸುವುದರ ಜೊತೆಗೆ ಕುಡಿಯುವ ನೀರಿನ ಬೇಡಿಕೆಯನ್ನು ಸಹ ಪೂರೈಸಬೇಕಾಗಿರುತ್ತದೆ. ಸದರಿ ನಾಲೆಯನ್ನು ಸುಮಾರು 25 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದು, ಪ್ರಸ್ತುತ ನಾಲೆಯಲ್ಲಿ ನಿಗದಿತ ವಿನ್ಯಾಸದ ಪ್ರಮಾಣದ ನೀರನ್ನು ನಾಲೆಯ ಕೊನೆಯ ಭಾಗಕ್ಕೆ ಹರಿಸಲು ಸಾಧ್ಯವಾಗುತ್ತಿಲ್ಲ.

6. ಕುಣಿಗಲ್ ತಾಲ್ಲೂಕಿನ ಪ್ರದೇಶವು ಹಲವು ವರ್ಷಗಳಿಂದ ಬರಪೀಡಿತವಾಗಿದ್ದು, ಕುಡಿಯುವ ನೀರು ಮತ್ತು ನೀರಾವರಿ ಸೌಕರ್ಯಕ್ಕೆ ಹೇಮಾವತಿ ನಾಲೆಯ ಮೇಲೆ ಅವಲಂಬಿತವಾಗಿರುತ್ತದೆ ಮತ್ತು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಬಹುತೇಕ ಪ್ರದೇಶವು ಕುಡಿಯುವ ನೀರಿಗೆ ಹೇಮಾವತಿ ಯೋಜನೆಯ ಮಾಗಡಿ ಕುಡಿಯುವ ನೀರಿನ ಯೋಜನೆ ಮೇಲೆ ಅವಲಂಬಿತವಾಗಿರುತ್ತದೆ. ನಾಲೆ ನಿರ್ಮಿತವಾಗಿನಿಂದ ಇಲ್ಲಿಯವರೆಗೂ ತುಮಕೂರು ಶಾಖಾ ನಾಲೆಯ 170 ಕಿ.ಮೀ ನಿಂದ ಮುಂದಕ್ಕೆ ನಿಗದಿತ ನೀರು ನಾಲೆಯಲ್ಲಿ ಹರಿದಿರುವುದಿಲ್ಲ. ಆದ್ದರಿಂದ ಜನಪ್ರತಿನಿಧಿಗಳು ತುಮಕೂರು ಶಾಖಾ ನಾಲೆಯ 70 ಕಿ.ಮೀ ಇಂದ ನೇರವಾಗಿ ಕುಣಿಗಲ್ ತಾಲ್ಲೂಕಿಗೆ ಸಂಪರ್ಕ ಕಲ್ಪಿಸುವ ನಾಲೆಯನ್ನು ನಿರ್ಮಿಸಲು ಒತ್ತಾಯಿಸಿರುತ್ತಾರೆ. ಆದ್ದರಿಂದ ತುಮಕೂರು ಶಾಖಾ ನಾಲೆಯ 70.00 ಕಿ.ಮೀ ರಿಂದ 165.60 ಕಿ.ಮೀ.ವರೆಗೆ ಸಂಪರ್ಕ ಕಲ್ಪಿಸುವ ಪೈಪ್ ಲೈನ್ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

7. ಉದ್ದೇಶಿತ ಪೈಪ್‌ಲೈನ್ 34.535 ಕಿ.ಮೀ ಉದ್ದವಿದ್ದು, 388 ಕ್ಯೂಸೆಕ್ಸ್ ನೀರು ಹರಿಸಲು ವಿನ್ಯಾಸಿಸಲಾಗಿರುತ್ತದೆ. ಭೂಸ್ವಾಧೀನ ಸಮಸ್ಯೆಯಿಂದ ಕಾಮಗಾರಿಯ ವಿಳಂಬನ್ನು ತಪ್ಪಿಸಲು ಪೈಪ್‌ಲೈನ್‌ನ್ನು ರಸ್ತೆಯಲ್ಲಿ ತೆಗೆದುಕೊಂಡು ಹೋಗಲು ಮತ್ತು ರಸ್ತೆಯನ್ನು ಮರು ನಿರ್ಮಿಸಲು ಉದ್ದೇಶಿಸಲಾಗಿದೆ.

8. ಈ ಹಿನ್ನೆಲೆಯಲ್ಲಿ, ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:70.00 ಕಿ.ಮೀ. ನಿಂದ 165.60 ಕಿ.ಮೀ.ವರೆಗೂ ಸಂಪರ್ಕ ಕಲ್ಪಿಸುವ ಪೈಪ್ ಲೈನ್ ಕಾಮಗಾರಿಯ ರೂ.614.00 ಕೋಟಿ ಮೊತ್ತದ ವಿವರವಾದ ಯೋಜನಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ರವರು ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

9. ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪಿತ ಯೋಜನೆಯನ್ನು ಎರಡು ಹಂತಗಳಲ್ಲಿ, ಅಂದರೆ ಮೊದಲನೇ ಹಂತ ರೂ.350.00 ಕೋಟಿ ಮತ್ತು ಎರಡನೇ ಹಂತ ರೂ.264.00 ಕೋಟಿ, ಒಟ್ಟಾರೆ ರೂ.614.00 ಕೋಟಿ ಮೊತ್ತದಲ್ಲಿ ಕೈಗೊಳ್ಳಲು ಹಾಗೂ ಮೊದಲನೇ ಹಂತಕ್ಕೆ ಮಾತ್ರ ಈಗ ಟೆಂಡರ್ ಕರೆಯುವ ಬಗ್ಗೆ ಅನುಮೋದಿಸಿರುತ್ತಾರೆ.

10. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಸರ್ಕಾರಿ ಆದೇಶ ಸಂಖ್ಯೆ : ಜಸಂಇ 5 ಎನ್‌ಹೆಚ್‌ಪಿ 2019, ಬೆಂಗಳೂರು, ದಿನಾಂಕ : 26-06-2019

ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:70.00 ಕಿ.ಮೀ. ನಿಂದ 165.60 ಕಿ.ಮೀ.ವರೆಗೂ ಸಂಪರ್ಕ ಕಲ್ಪಿಸುವ ಪೈಪ್ ಲೈನ್ ಕಾಮಗಾರಿಯ ರೂ.614.00 ಕೋಟಿ (ರೂಪಾಯಿ ಆರು ನೂರಾ ಹದಿನಾಲ್ಕು ಕೋಟಿಗಳು ಮಾತ್ರ) ಗಳ ಮೊತ್ತದ ವಿವರವಾದ ಯೋಜನಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಪ್ರಸ್ತಾಪಿತ ಯೋಜನೆಯನ್ನು ಎರಡು ಹಂತಗಳಲ್ಲಿ, ಅಂದರೆ ಮೊದಲನೇ ಹಂತ ರೂ.350.00 ಕೋಟಿ ಮತ್ತು ಎರಡನೇ ಹಂತ ರೂ.264.00 ಕೋಟಿ, ಒಟ್ಟಾರೆ ರೂ.614.00 ಕೋಟಿ ಮೊತ್ತದಲ್ಲಿ ಕೈಗೊಳ್ಳತಕ್ಕದ್ದು ಹಾಗೂ 2019-20ನೇ ಸಾಲಿನಲ್ಲಿ ಮೊದಲನೇ ಹಂತಕ್ಕೆ ಮಾತ್ರ ಟೆಂಡರ್ ಕರೆಯಲು ಅನುಮೋದಿಸಿದೆ.

3. ಈ ಆದೇಶವು ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977 ರ 17ನೇ ನಿಯಮದ (2)ನೇ ಉಪ ನಿಯಮದ ಪರಂತುಕದ ವ್ಯಾಪ್ತಿಯೊಳಗೆ ಬರುತ್ತದೆ ಮತ್ತು ಅದರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

20/06/19

(ಬಿ.ಹರಿನಾರಾಯಣ)
**ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2)**
**ಜಲ ಸಂಪನ್ಮೂಲ ಇಲಾಖೆ.**

ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2),
ಜಲ ಸಂಪನ್ಮೂಲ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಬೆಂಗಳೂರು.

**ಇವರಿಗೆ :-**

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ-353/2019, ದಿನಾಂಕ:14-06-2019).
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.